**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಎದುರುದಾರ 1 ಹಾಗೂ ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಎದುರುದಾರ 2 ರವರ ಪರ ವಕೀಲರಾದ ಶ್ರೀ ಕೆ ಎನ್ ಪಿ ರವರ ಪರವಾಗಿ**ಃ

ದಿಃ 16.02.1999 ನನ್ನ ಜನ್ಮ ದಿನಾಂಕವಾಗಿರುವುದು. ಇದಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ದಿಃ 01.01.2025 ರಂದು ಕುಳಲಿ ಗ್ರಾಮದ ಬಸವೇಶ್ವರ ನಗರದಿಂದ ಕುಳಲಿ ಗ್ರಾಮದ ಕಡೆ ಮಧ್ಯ ರಾತ್ರಿ 12.30 ಗಂಟೆ ಸುಮಾರಿಗೆ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಬರುತ್ತಿದ್ದೇನು. ಅದರ ನೊಂದಣಿ ಸಂಖ್ಯೆ ಕೆಎ-48-ಇಇ-3901. ಈ ವಾಹನಕ್ಕೆ ಸಂಬಂಧಪಟ್ಟಂತೆ ಆರ್.ಸಿ ದಾಖಲಾತಿಯಾಗಲೀ, ಚಾಲನಾ ಪರವಾನಿಗೆ ಪತ್ರವಾಗಲೀ ಹಾಜರು ಪಡಿಸಿರುವುದಿಲ್ಲ. ನನ್ನದು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ. ಆ ದಿನ ನಾನು ಒಬ್ಬನೇ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಹೋಗುತ್ತಿದ್ದೇನು. ಆ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ಆ ದಿನ ನನಗೆ ಒಂದು ದ್ವಿಚಕ್ರ ವಾಹನ ಬಂದು ಡಿಕ್ಕಿ ಪಡಿಸಿರುವುದು. ಅದರ ನೊಂದಣಿ ಸಂಖ್ಯೆ ಈಗ ನನಗೆ ನೆನಪಿರುವುದಿಲ್ಲ. ಆ ದಿನ ನಾನು ನನ್ನ ದ್ವಿಚಕ್ರವಾಹವನ್ನು ಅತೀ ವೇಗವಾಗಿ ನಿರ್ಲಕ್ಷತೆಯಿಂದ ಚಲಾಯಿಸಿಕೊಂಡು ಹೋಗಿ 1 ನೇ ಎದುರುದಾರ ಮಾಲೀಕತ್ವದ ದ್ವಿಚಕ್ರ ವಾಹನ ನೊಂದಣಿ ಸಂಖ್ಯೆ ಕೆಎ-24-ವಿ-3692 ರ ವಾಹನಕ್ಕೆ ಡಿಕ್ಕಿ ಪಡಿಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಸದರಿ ವಾಹನವನ್ನು ಯಾರು ಚಾಲಾಯಿಸುತ್ತಿದ್ದರು ಎಂದರೆ ಕರೆಪ್ಪ ಕರಿಗಾರ ಎಂಬುವವನು ಚಲಾಯಿಸುತ್ತಿದ್ದನು.

2. ಈ ಅಪಘಾತ ಸಂಪೂರ್ಣವಾಗಿ ನನ್ನ ತಪ್ಪಿನಿಂದಲೇ ಆಗಿರುವುದು ಎಂದರೆ ಸರಿಯಲ್ಲ. ಈ ಅಪಘಾತದ ನಂತರ ನಾನು ಮುಧೋಳದ ವಿ.ಕೆ.ಪಾಟೀಲ ಆಸ್ಪತ್ರೆಗೆ ದಾಖಲಾಗಿರುವೆನು. 6 ದಿನಗಳ ವರೆಗೆ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವೆನು. ದಿಃ 01.01.2025 ರಿಂದ 07.01.2025 ರವರೆಗೆ ಚಿಕಿತ್ಸೆ

ಪಡೆದುಕೊಂಡಿರುವೆನು. ಈ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡು ನಾನು ವೈದ್ಯಕೀಯ ಚಿಕಿತ್ಸೆ ಗಾಗಿ ರೂ. 1 ಲಕ್ಷ 50 ಸಾವಿರ ಹಣ ಖರ್ಚು ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಭವಿಷ್ಯದ ವೈದ್ಯಕೀಯ ಚಿಕಿತ್ಸೆಗಾಗಿ ರೂ. 1 ಲಕ್ಷ ಹಣದ ಅವಶ್ಯಕತೆ ಇರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭವಿಷ್ಯದ ಚಿಕಿತ್ಸೆಯ ಹಣಕ್ಕೆ ಸಂಬಂಧಪಟ್ಟಂತೆ ವೈದ್ಯರು ಪ್ರಮಾಣ ಪತ್ರ ನೀಡಿರುವುದಿಲ್ಲ, ಆದರೆ ಈಗಲೂ ಸಹ ನಾನು ವೈದ್ಯರ ಹೋಗಿ ಚಿಕಿತ್ಸೆ ಪಡೆಯುತ್ತಿರುವೆನು.

3. ನನಗೆ ಪ್ರತಿ ತಿಂಗಳು ರೂ. 35 ಸಾವಿರ ಆದಾಯ ಇದ್ದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಅರ್ಜಿಯಲ್ಲಿ ಹೇಳಿರುವಂತೆ ಒಕ್ಕಲತನದಿಂದ ಪ್ರತಿ ತಿಂಗಳು ರೂ. 25 ಸಾವಿರ ಹಣ ಹಾಗೂ ಫಿಗ್ಮಿಯಿಂದ ಪ್ರತಿ ತಿಂಗಳು ರೂ. 10 ಸಾವಿರ ಹಣ ಹೀಗೆ ಒಟ್ಟು ರೂ. 35 ಸಾವಿರ ಹಣ ಪ್ರತಿ ತಿಂಗಳು ನಾನು ಸಂಪಾದನೆ ಮಾಡುತ್ತಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಹೆಸರಿನಲ್ಲಿನ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುವುದು. ಆ ಜಮೀನಿನ ಪಹಣಿ ಪತ್ರಿಕೆಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಈ ಜಮೀನುಗಳಿಂದ ನಾನು ಪ್ರತಿ ವರ್ಷ ರೂ. 3 ಲಕ್ಷ ಆದಾಯ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ಅಪಘಾತ ನನ್ನ ತಪ್ಪಿನಿಂದಲೇ ಆಗಿರುವುದರಿಂದ ಆ ಕಾರಣಕ್ಕೆ ಪೊಲೀಸರು ನಿಪಿ 6 ರ ಅಂತಿಮ ದೋಷಾರೋಪಣ ಪಟ್ಟಿಯಲ್ಲಿ ನನ್ನನ್ನು 1ನೇ ಆರೋಪಿಯನ್ನಾಗಿ ಕಾಣಿಸಿರುವರು ಎಂದರೆ ಅದು ನಿಜವಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ನಮ್ಮ ಕುಟುಂಬದ ವಂಶಾವಳಿಯನ್ನು ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಈಗಲೂ ಸಹ ನಾನು ದೈಹಿಕವಾಗಿ ಸದೃಡವಾಗಿ ಕೆಲಸ ಮಾಡುವ ಸಾಮರ್ಥ್ಯ ಹೊಂದಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ಸಂಪೂರ್ಣವಾಗಿ ನನ್ನ ತಪ್ಪಿನಿಂದಲೇ ಆಗಿರುವುದರಿಂದ ಆ ಕಾರಣಕ್ಕೆ ಎದುರುದಾರ 2 ರವರು ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಹಣ ನೀಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ದಾಖಲೆಗಳು ಮತ್ತು ಬಿಲ್ ಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ಹಾಗೂ ಹೆಚ್ಚಿನ ಪರಿಹಾರ ಪಡೆದುಕೊಳ್ಳುವ ಸಲುವಾಗಿ

ಅವುಗಳನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಕಾರಣಕ್ಕೆ ಎದುರುದಾರ 2 ರವರು ಯಾವುದೇ ಪರಿಹಾರ ಹಣ ನೀಡಲು ಬಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ